# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 57 / 2019

ಸಿಡಬ್ಲ್ಯೂ- **23**
ಪಿಡಬ್ಲ್ಯೂ- **14**

ದಿನಾಂಕಃ **17.07.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರುಃ - ಸ್ಟೀಫನ್
ತಂದೆಯ/ಗಂಡನ ಹೆಸರುಃ - ಜಾನ್‌ಪಾಲ್
ವಯಸ್ಸುಃ -? **15** ವರ್ಷ
ಉದ್ಯೋಗಃ - ವಿದ್ಯಾರ್ಥಿ.
ವಾಸಸ್ಥಳಃ - ಯಾದಗಿರಿ.

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಮೃತ ಜಾನ್‌ಪಾಲ್ ನನ್ನ ತಂದೆಯಾಗಬೇಕು. ಚಾಸಾ-1 ನನ್ನ ತಾಯಿಯಾಗಬೇಕು. ಮೃತ ಸ್ಟೀಫನ್ ಫೀಟರ್ ನನ್ನ ಅಣ್ಣನಾಗಬೇಕು. ದಿನಾಂಕಃ 31.05.2018 ರಂದು ಸಾಯಂಕಾಲ 6 ಗಂಟೆಗೆ ನಾನು, ನನ್ನ ತಾಯಿ, ತಂದೆ, ಅಣ್ಣ ಹಾಗೂ ನನ್ನ ಸಂಬಂಧಿಕರು ಕೂಡಿ ಪ್ರಾರ್ಥನೆ ಮಾಡಲು ಚರ್ಚ್ ಗೆ ಹೋಗಿದ್ದೇವು. ನಾವು ಕಂಮಾಂಡರ್ ಜೀಪ್ ಸಂಖ್ಯೆ ಕೆಎ-36-ಎಂ-1306 ನೇದ್ದರಲ್ಲಿ ಹೋಗಿದ್ದೇವು ಅದನ್ನು ಬಸವರಾಜ ತಂದೆ ಸಣ್ಣ ತಾಯಪ್ಪ ರವರು ಚಲಾಯಿಸುತ್ತಿದ್ದರು. ನಾವು ಪ್ರಾರ್ಥನೆ ಮುಗಿಸಿ ಯಾದಗಿರಿಗೆ ಮರಳಿ ಬರುವಾಗ ಆಶನಾಳ ಗೇಟ್ ದಾಟಿ ಮುಂಡರಗಿ ಸಮೀಪ ಯಾದಗಿರಿ ಕಡೆಯಿಂದ ಒಂದು ಬೂದಿ ಟ್ಯಾಂಕರ್ ಅತೀ ವೇಗವಾಗಿ, ಅಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು ನಮ್ಮ ಜೀಪಿಗೆ ಜೋರಾಗಿ ಡಿಕ್ಕಿಪಡಿಸಿದ್ದನ್ನು. ಅಪಘಾತದಿಂದ ನನ್ನ ಬಾಯಿಗೆ ತುಟಿಗೆ ಗಾಯಗಳು ಆಗಿದ್ದವು. ನನ್ನ ತಂದೆಗೆ ರಕ್ತ ಗಾಯಗಳು ಆಗಿದ್ದವು. ಎಲಿಜಬೆತ್ ಗಂಡ ದೇವರಾಜ್ ಮತ್ತು ಬಸವರಾಜ ರವರಿಗೆ ರಕ್ತಗಾಯಗಳು ಆಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಅಪಘಾತವು ರಾತ್ರಿ 10 ಗಂಟೆಗೆ ಆಗಿತ್ತು. ಅಪಘಾತವು ಮುಂಡರಗಿ ಗ್ರಾಮ ಪಂಚಾಯಿತಿ ಎದುರುಗಡೆ ಆಗಿತ್ತು. ಬೂದಿ ಟ್ಯಾಂಕರ್ ನಂಬರ ಕೆಎ-22-ಬಿ-7049 ಇರುತ್ತದೆ. ಸದರಿ ಚಾಲಕನ ಹೆಸರು ಆನಂದಪ್ಪ ತಂದೆ ಮಹಾದೇವಪ್ಪ ಇರುತ್ತದೆ ಎಂದು ನನಗೆ ಗೊತ್ತಿರುತ್ತದೆ. ಅಪಘಾತವು ಬೂದಿ ಟ್ಯಾಂಕರ್ ಚಾಲಕನ ತಪ್ಪಿನಿಂದ ಆಗಿತ್ತು. ನನ್ನ ಅಣ್ಣನಾದ ಸ್ಟೀಫನ್ ಫೀಟರ್ ಇತನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮೃತಪಟ್ಟಿರುತ್ತಾನೆ. ಬೂದಿ ಟ್ಯಾಂಕರ್ ಚಾಲಕನನ್ನು ನನಗೆ

ತೋರಿಸಿದ್ದರೆ ನಾನು ಗುರುತು ಹಿಡಿಯುತ್ತೇನೆ. ಆತನ್ನು ಈಗ ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ ಆತನೇ ಬೂದಿ ಟ್ಯಾಂಕರ್ ಚಾಲಕನ್ನಾಗಿರುತ್ತಾನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಜಿ.ಬಿ.ಆರ್. ರವರಿಂದಃ

ಅಪಘಾತ ಆದಾಗ ನನಗೆ 9 ವಯಸ್ಸು ಇತ್ತು. ಜೀಪು ಬಸವರಾಜನಿಗೆ ಸಂಬಂದಪಟ್ಟಿತ್ತು ಮತ್ತು ಅದು ಅವರದು ಇತ್ತು. ಅಪಘಾತ ಆಗುವುದಕ್ಕಿಂತ ಮುಂಚೆ ಜೀಪಿನ ಚಾಲಕನಾದ ಬಸವರಾಜನ ಪರಿಚಯ ನನಗೆ ಇರಲಿಲ್ಲ. ಬಸವರಾಜನು ಚಾಲನಾ ಪರವಾನಿಗೆ ಪತ್ರವನ್ನು ಹೊಂದಿದ್ದನ್ನು ಆದರೆ ಅದನ್ನು ನಾನು ನೋಡಿರುವುದಿಲ್ಲ. ಬಸವರಾಜನು ಚಾಲನಾ ಪರವಾನಿಗೆ ಪತ್ರವನ್ನು ಹೊಂದಿದ್ದೇನೆ ಎಂದು ನಿಮ್ಮಗೆ ಯಾವಾಗ ಹೇಳಿರುತ್ತಾನೆ ಎಂದರೆ ಸಾಕ್ಷಿಯು ಆತನಿಗೆ ವಯಸ್ಸು ಹೆಚ್ಚು ಇರುವ ಕಾರಣ ಚಾಲನಾ ಪರವಾನಿಗೆ ಪತ್ರವನ್ನು ಹೊಂದಿರುತ್ತಾನೆ ಎಂದು ನಾನು ಹೇಳಿರುತ್ತೇನೆ ನಾವು ಪ್ರಯಾಣಿಸುತ್ತಿದ್ದ ಜೀಪಿನಲ್ಲಿ 8-9 ಜನರು ಇದ್ದರು. ಜೀಪಿನಲ್ಲಿ ಎಷ್ಟು ಜನರಿಗೆ ಪ್ರಯಾಣಿಸಲು ಅವಕಾಶ ಇತ್ತು ಎಂದರೆ ಸಾಕ್ಷಿಯು ನಾನು ಚಿಕ್ಕವನ್ನು ಇದ್ದೆ ಎಂದು ಹೇಳುತ್ತಾರೆ. ನಾನು ಜೀಪಿನ ಹಿಂದಿದ ಆಸಾನದಲ್ಲಿ ಕುಳಿತ್ತಿದ್ದೆ. ನಾವು ಜೀಪಿನ ಹಿಂದಿನ ಆಸಾನದಲ್ಲಿ ಕುಳಿತ್ತಿದ್ದ ಕಾರಣ ಜೀಪಿನು ಅದರ ಚಾಲಕನು ಯಾವ ರೀತಿಯಾಗಿ ಚಲಾಯಿಸುತ್ತಿದ್ದನ್ನು ಎಂದು ನನಗೆ ಹೇಳಲು ಬರುವುದಿಲ್ಲ. ಅಪಘಾತ ಪಡಿಸಿದ ಸ್ದಳದಲ್ಲಿ ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ಅಲ್ಲಿ ರಸ್ತೆಯ ದುರಸ್ದಿ ಕಾರ್ಯ ಇರಲಿಲ್ಲ. ರಾತ್ರಿ ಸಮಯದಲ್ಲಿ ಎದರು ಬದರು ಬರುತ್ತಿದ್ದ ವಾಹನಗಳ ಲೈಟಿನ ಬೆಳಕು ಒಬ್ಬರ ವಾಹನಗಳ ಮೇಲೆ ಬೆಳಕು ಹರಡುತ್ತಿದ್ದಾಗ ಸದರಿ ವಾಹನಗಳಲ್ಲಿ ಯಾರು ಇರುತ್ತಾರೆ ಮತ್ತು ಅವುಗಳನ್ನು ಯಾರು ಚಲಾಯಿಸುತ್ತಿದ್ದರು ಎಂದು ಕಾಣುವುದಿಲ್ಲ ಎಂದರೆ ಸರಿ. ಅವತ್ತು ಬೂದಿ ಟ್ಯಾಂಕರ್ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗುರುತು ಹಿಡಿಯಲು ಆಗುವುದಿಲ್ಲ ಎಂದರೆ ಸರಿ. ಪೊಲೀಸರ ಹೇಳಿಕೆಯ ಮೇರೆಗೆ ಬೂದಿ ಟ್ಯಾಂಕರ ಚಾಲಕನ್ನು ಆರೋಪಿ ಇರುತ್ತಾನೆ ಎಂದು ನನಗೆ ಗೊತ್ತಾಯಿತು. ಇದೇ ಮೊದಲ ಬಾರಿಗೆ ನೀವು ಆರೋಪಿತನನ್ನು ನ್ಯಾಯಾಲಯದಲ್ಲಿ ನೋಡುತ್ತಿದ್ದೀರಿ ಎಂದರೆ ಸಾಕ್ಷಿಯು ಇಲ್ಲ ಇದಕ್ಕಿಂತ ಮುಂಚೆ ಆತನನ್ನು ಪೊಲೀಸ್ ಠಾಣೆಯಲ್ಲಿ ನಾನು ನೋಡಿರುತ್ತೇನೆ ಎಂದು ಹೇಳುತ್ತಾರೆ. ಯಾವ ದಿನಾಂಕದಂದು ಆರೋಪಿತನನ್ನು ಯಾರು ತೋರಿಸಿದರು ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತ ಆದ 5-6 ದಿನಗಳ ನಂತರ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದರು. ನಾನು ಪೊಲೀಸ್ ಠಾಣೆಗೆ ಹೋಗಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತ ಆದ 5-6 ದಿನಗಳ ನಂತರ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಪ್ರಯಾಣಿಸುತ್ತಿದ್ದ ಜೀಪು ವಿಮೆಗೆ ಒಳಪಟ್ಟಿರಲಿಲ್ಲ ಆದ

ಕಾರಣ ಅಪಘಾತ ಪರಿಹಾರವನ್ನು ಪಡೆಯುವ ಗೋಸ್ಕರ ವಿಮೆಗೆ ಒಳಪಟ್ಟಿದ ಬೂದಿ ಟ್ಯಾಂಕರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತವು ನಮ್ಮ ಜೀಪಿನ ಚಾಲಕನ ತಪ್ಪಿನಿಂದ ಆಗಿತ್ತು ಎಂದರೆ ಸರಿಯಲ್ಲ. ಆ ದಿನ ಬೂದಿ ಟ್ಯಾಂಕರ್ ನ್ನು ಆರೋಪಿತನು ಚಲಾಯಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.